ನಿಮ್ಮೊಡನೆ

# ಜ್ಞಾನಪೀಠದ ಸಂಭ್ರಮ

ನೂರೆಂಟು ಭಾಷೆಗಳಿರುವ ಭಾರತದಲ್ಲಿ ಕನ್ನಡವೊಂದೇ ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಬಾಚಿಕೊಂಡಿರುವುದು ಸಣ್ಣ ಸಾಧನೆಯೇನಲ್ಲ.

ಕನ್ನಡಕ್ಕೆ ಮತ್ತೊಂದು ಜ್ಞಾನಪೀಠ ಪ್ರಶಸ್ತಿ ಪ್ರಕಟವಾಗಿದೆ. ಅದರಲ್ಲೂ ಅದು ಕನ್ನಡಿಗರೆಲ್ಲರ ಪ್ರೀತಿಪಾತ್ರ ಕವಿ, ನಾಟಕಕಾರ ಚಂದ್ರಶೇಖರ ಕಂಬಾರರಿಗೆ ಲಭಿಸಿದೆ. ಕನ್ನಡದ ಮನಗಳಲ್ಲಿ ಎಲ್ಲೆಡೆ ಸಂಭ್ರಮ. ಎಡ–ಬಲ–ಮಧ್ಯ ಪಂಥಗಳಲ್ಲಿ ಹಂಚಿಹೋಗಿರುವ ಬಹುತೇಕ ಕನ್ನಡ ಸಾಹಿತಿಗಳು ಈ ಪ್ರಶಸ್ತಿಯನ್ನು ಸಂಭ್ರಮದಿಂದಲೇ ಸ್ವಾಗತಿಸಿದ್ದಾರೆ. ಮನಸ್ಸಿನಲ್ಲಿ ಅಲ್ಪ– ಸ್ವಲ್ಪ ಭಿನ್ನಮತ ಇರುವವರು ಕೂಡಾ 'ಈ ಘಳಿಗೆಯಲ್ಲಿ ಅದೆಲ್ಲ ಗೌಣ. ಕಂಬಾರರಿಗೆ ಜ್ಞಾನಪೀಠ ಪ್ರಶಸ್ತಿ ಸಿಕ್ಕಿರುವುದು ನಿಜಕ್ಕೂ ಕನ್ನಡನಾಡೇ ಸಂಭ್ರಮ ಪಡಬೇಕಾದ ವಿಷಯ' ಎಂದು ಬಹಿರಂಗವಾಗಿಯೇ ಹೇಳುತ್ತಿದ್ದಾರೆ. ಒಬ್ಬ ಪಾಟೀಲ ಪುಟ್ಟಪ್ಪ ಮಾತ್ರ 'ನಿಜಕ್ಕೂ ಭೈರಪ್ಪ ಅವರಿಗೆ ಜ್ಞಾನಪೀಠ ಸಿಗಬೇಕಾಗಿತ್ತು; ಕಂಬಾರರು ಅದಕ್ಕೆ ಅರ್ಹರಲ್ಲ. ಅವರು ಲಾಬಿ ಮಾಡಿ ಪ್ರಶಸ್ತಿ ಪಡೆದಿದ್ದಾರೆ' ಎಂದು ಹೇಳಿಕೆ ನೀಡಿದರು. ಈ ಹೇಳಿಕೆಯ ಬೆನ್ನಲ್ಲೆ ಸಾಹಿತ್ಯ ವಲಯದ ಹಲವು ದಿಕ್ಪಾಲಕರು 'ಪಾಪು ಹೇಳಿಕೆ'ಯ ಮೇಲೆ ಮುಗಿಬಿದ್ದರು. ಅಷ್ಟಕ್ಕೇ ಆ ಭಿನ್ನಮತದ ಹೇಳಿಕೆಗೂ 'ಅಕಾಲ ಮುಪ್ಪು' ಅಡರಿ, ಎಲ್ಲೆಡೆ ಈಗ ಜ್ಞಾನಪೀಠದ ಸಂಭ್ರಮವಷ್ಟೇ ಉಳಿದುಕೊಂಡಿದೆ.

1965ರಲ್ಲಿ ಆರಂಭವಾದದ್ದು ಜ್ಞಾನಪೀಠ ಪ್ರಶಸ್ತಿ. ಮಲಯಾಳಂನ ಜಿ.ಶಂಕರ ಕುರುಪ್ ಅವರಿಗೆ ಚೊಚ್ಚಲ ಜ್ಞಾನಪೀಠ ಪ್ರಶಸ್ತಿ ಸಿಕ್ಕಿದ ಬಳಿಕ, ಮೂರೇ ವರ್ಷಗಳಲ್ಲಿ ಅದು ಕನ್ನಡದ ಕುವೆಂಪು (1967) ಅವರನ್ನು ಹುಡುಕಿಕೊಂಡು ಬಂತು. ಇದೀಗ ಕಂಬಾರರ ಮೂಲಕ ಕನ್ನಡಕ್ಕೆ ಸಿಕ್ಕಿರುವುದು ಎಂಟನೇ ಜ್ಞಾನಪೀಠ. ಆ ಮಧ್ಯೆ ದ.ರಾ.ಬೇಂದ್ರೆ (1973), ಡಾ.ಶಿವರಾಮ ಕಾರಂತ (1977), ಮಾಸ್ತಿ ವೆಂಕಟೇಶ ಅಯ್ಯಂಗಾರ್ (1983), ವಿ.ಕೃ.ಗೋಕಾಕ್ (1990)– ಹೀಗೆ ಕನ್ನಡ ಸಾಹಿತ್ಯದ ಮೇರುಪ್ರತಿಭೆಗಳು ಆ ಪಟ್ಟವನ್ನು ಅಲಂಕರಿಸಿದವು. ಆಗೆಲ್ಲಾ ಜ್ಞಾನಪೀಠ ಪ್ರಶಸ್ತಿ ಪಡೆದವರ ಮಹತ್ವದ ಕೃತಿಯೊಂದನ್ನು ಅದಕ್ಕಾಗಿ ಹೆಸರಿಸಲಾಗಿತ್ತು. 1994ರಲ್ಲಿ ಅನಂತಮೂರ್ತಿ ಹಾಗೂ 1998ರಲ್ಲಿ ಗಿರೀಶ್ ಕಾರ್ನಾಡ್ ಅವರಿಗೆ ಈ ಪ್ರತಿಷ್ಠಿತ ಪ್ರಶಸ್ತಿ ಒಲಿಯುವ ವೇಳೆಗೆ ಸಾಹಿತಿಗಳ ಒಟ್ಟು ಸಾಹಿತ್ಯಕೃಷಿಯನ್ನು ಗಮನಿಸಿ ಪ್ರಶಸ್ತಿ ಘೋಷಿಸುವ ಪದ್ಧತಿ ಶುರುವಾಗಿತ್ತು.

ನೂರೆಂಟು ಭಾಷೆಗಳಿರುವ ಭಾರತದಲ್ಲಿ ಕನ್ನಡವೊಂದೇ ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಬಾಚಿಕೊಂಡಿರುವುದು ಸಣ್ಣ ಸಾಧನೆಯೇನಲ್ಲ. ರಾಷ್ಟ್ರೀಯ ಭಾಷೆ ಎಂದು ಕರೆಯಿಸಿಕೊಳ್ಳುವ, ಕನ್ನಡಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಮಾತನಾಡುವವರನ್ನು ಮತ್ತು ಬರೆಯುವವರನ್ನು ಹೊಂದಿರುವ ಹಿಂದಿ ಸಾಹಿತ್ಯಕ್ಕೂ ಅಷ್ಟೇ ಸಂಖ್ಯೆಯ ಜ್ಞಾನಪೀಠ ಪ್ರಶಸ್ತಿಗಳು ಲಭಿಸಿವೆ ಎನ್ನುವುದು ಕನ್ನಡ ಭಾಷೆಯ ಘನತೆಯನ್ನೂ, ಕನ್ನಡ ಸಾಹಿತ್ಯದ ವಿಸ್ತಾರವನ್ನೂ ಸೂಚಿಸುತ್ತದೆ. ಮಲಯಾಳಂ, ಬಂಗಾಳಿ ಮುಂತಾದ ಪ್ರಭಾವಶಾಲಿ, ಸಾಹಿತ್ಯನಿಷ್ಠ ಭಾಷೆಗಳ ಪೈಪೋಟಿಯ ಮಧ್ಯೆ ಕನ್ನಡದ ಈ ಹಿರಿಮೆ ಗಮನಾರ್ಹ. ಅಷ್ಟರಮಟ್ಟಿಗೆ ನಮ್ಮ ಸಂಭ್ರಮಕ್ಕೆ ಮಹತ್ತಾದ ಅರ್ಥವಿದೆ. ಈ ಸಂಭ್ರಮದ ಸಂದರ್ಭದಲ್ಲಿ 'ಮೊಸರಲ್ಲಿ ಕಲ್ಲು ಹುಡುಕುವ ಕೆಲಸ' ನಿಜಕ್ಕೂ ಸರಿಯಲ್ಲ. ಪಾಟೀಲ ಪುಟ್ಟಪ್ಪನವರು ಹೇಳಿದಂತೆ ಎಸ್.ಎಲ್.ಭೈರಪ್ಪ ಅವರ ಸಾಹಿತ್ಯಕೃಷಿ ಅಗಾಧವಾದದ್ದೇ. ಅವರಿಗೂ ಜ್ಞಾನಪೀಠ ಬರಬೇಕು. ಆದರೆ ಅದಕ್ಕಾಗಿ ಕಂಬಾರರರನ್ನು ಹೀಗಳೆದು ಮಾತನಾಡಬೇಕಾದ ಅಗತ್ಯವಿರಲಿಲ್ಲ. ಹಾಗೆ ನೋಡಿದರೆ ಈ ಸಲ ಜಿ.ಎಸ್.ಶಿವರುದ್ರಪ್ಪ ಅವರಿಗೆ ಜ್ಞಾನಪೀಠ ಪ್ರಶಸ್ತಿ ಸಿಗಬಹುದು ಎಂಬ ಸಣ್ಣದೊಂದು ನಿರೀಕ್ಷೆ ಕನ್ನಡದ ಸಾಹಿತ್ಯವಲಯದಲ್ಲಿ ಇತ್ತು. ಕಂಬಾರರಿಗೆ ಪ್ರಶಸ್ತಿ ಪ್ರಕಟವಾದಾಗ ಜಿಎಸ್ಸೆಸ್ ಅವರು ಮುಂದಿನ ಸಾಲಿನಲ್ಲಿ ನಿಂತು, ಸಂಭ್ರಮವನ್ನು ಹಂಚಿಕೊಂಡಿದ್ದಾರೆ. ಕನ್ನಡದ ಮನಸ್ಸು ಎಂದರೆ ಹೀಗೆ ಉದಾತ್ತ ಮನಸ್ಸೇ ಆಗಿರಬೇಕು.

ಯಾವ ಇಸಂಗಳಿಗೂ ಜೋತು ಬೀಳದೆ, ತಮ್ಮಷ್ಟಕ್ಕೆ ತಾವು ಕುಳಿತು ಬರೆದದ್ದಷ್ಟೇ ಕಂಬಾರರ ಸಾಧನೆ ಎನ್ನುವವರೂ ಇದ್ದಾರೆ. 'ಇಸಂಗಳಿಗೆ ಜೋತು ಬೀಳದೇ ಇರುವುದೇ ಶ್ರೇಷ್ಠ ಸಾಹಿತ್ಯದ ಲಕ್ಷಣ' ಎನ್ನುವುದೂ ಬಾಲಿಶತನ. ಕಂಬಾರರ ಕಾವ್ಯ, ನಾಟಕ, ಕಾದಂಬರಿಗಳಲ್ಲಿ ಮುಪ್ಪುರಿಗೊಂಡಿರುವ ದೇಸೀಯತೆ ಮತ್ತು ಜಾನಪದ ಸೊಗಡು– ಅವರನ್ನು ಸಾಹಿತ್ಯದ ನವ್ಯಕಾಲದಲ್ಲಿ ಇನ್ನೆಲ್ಲರಿಗಿಂತ ಭಿನ್ನವಾಗಿಸಿತು. ನವ್ಯದವರ ಜತೆಗಿದ್ದೂ ತಮ್ಮದೇ ಆದ ಬರವಣಿಗೆಯ ಮಾರ್ಗವೊಂದನ್ನು ಕಂಡುಕೊಂಡದ್ದು ಕಂಬಾರರ ಸಾಹಿತ್ಯಿಕ ಹೆಗ್ಗಳಿಕೆ. ಹಾಗೆಂದು ಕರ್ನಾಟಕದ ಸಾಂಸ್ಕೃತಿಕ ಬಿಕ್ಕಟ್ಟಿನ ಕಾಲದಲ್ಲಿ ಕಂಬಾರರು ಏನನ್ನೂ ಮಾತನಾಡದೆ ಮೌನವಾಗಿದ್ದವರೇನಲ್ಲ. ಪ್ರಗತಿಪರ ವಿಚಾರಧಾರೆಗಳ ಕುರಿತ ಅವರ ಒಲವುಗಳನ್ನು ಹಲವು ಸಂದರ್ಭಗಳಲ್ಲಿ ಗಟ್ಟಿಯಾಗಿಯೇ ಪ್ರಕಟಿಸಿದ್ದಾರೆ. ಹಾಗೆ ಪ್ರಕಟಿಸುವಾಗ ಆವೇಶಕ್ಕಿಂತ ಹೆಚ್ಚಾಗಿ ಗಾಂಭೀರ್ಯದೊಂದಿಗೆ ನಡೆದುಕೊಂಡಿದ್ದಾರೆ. ಬಹುಶಃ ಈ ಸಮತೂಕದ ವ್ಯಕ್ತಿತ್ವದಿಂದಾಗಿಯೇ ಅವರಿಗೆ ಇವತ್ತು ಶುಭಾಶಯಗಳ ಮಹಾಪೂರವೇ ಹರಿದುಬರುತ್ತಿದೆ. ಕಂಬಾರರ ಸಾಹಿತ್ಯದ ಪರವಾಗಿ 'ಕನ್ನಡದ ಲಾಬಿ' ಕೆಲಸ ಮಾಡಿದ್ದರೂ, ಅದರಲ್ಲಿ ತಪ್ಪೇನಿಲ್ಲ ಎನ್ನುವುದು ಅವರ ಸಾಹಿತ್ಯದ ಅಗಾಧ ವ್ಯಾಪ್ತಿಯನ್ನು ಓದಿದವರಿಗೆ ಸ್ಪಷ್ಟವಾಗುತ್ತದೆ.

■ ಬಿ.ಎಂ.ಹನೀಫ್

